# ‘ಪುರಾವೆ ಬೇಡದ ಪ್ರೀತಿ…’

<u>ಅವನು</u>

ಈ ಆರು ತಿಂಗಳುಗಳಿಂದ ನಾನು ಇವಳಿಗೆ ಹೇಳುತ್ತಲೇ ಬಂದಿದ್ದೇನೆ “ಎಲ್ಲಾದರೂ ಹೋಗಿಬಿಡೋಣ. ಈ ಸರ್ಕಸ್ ಅಷ್ಟೇ ನಮ್ಮ ಜೀವನವಲ್ಲ! ಇದನ್ನು ಬಿಟ್ಟು ಬೇರೆ ಬದುಕು ಕಟ್ಟಿಕೊಳ್ಳೋಣ!” ಆದ್ರೆ ಪ್ರತೀ ಸಲವೂ ಇವಳು ಹೇಳ್ತಾಳೆ, “ಸರ್ಕಸ್ ಬಿಟ್ಟರೆ ನಮಗೆ ಜೀವನವೇ ಇಲ್ಲ!” ಈ ಸರ್ಕಸ್‌ನಲ್ಲಿ ಇವಳಿಗೆ ಇರೋ ಆಕರ್ಷಣೆಯಾದರೂ ಏನೂಂತ ನಂಗೆ ಗೊತ್ತಾಗ್ತಾ ಇಲ್ಲ. ಮೊದಲೆಲ್ಲ ಇವಳು ಹೀಗಿರಲಿಲ್ಲ. ನನ್ನನ್ನು ತುಂಬಾ ಪ್ರೀತಿಸುತ್ತಿದ್ದಳು. ಈಗಲೂ ಪ್ರೀತಿಸ್ತಿದಾಳೆ, ನಿಜ. ಆದ್ರೆ ನಾನು ಇವಳ ಪ್ರೀತಿಗೆ ಅರ್ಹನೋ ಅಲ್ವೋ ಅನ್ನೋ ಅನುಮಾನ ಬರೋಹಾಗೆ ಮಾಡ್ತಿದಾಳೆ.

ಎರಡು ವರ್ಷದ ಹಿಂದೆ ನಾವಿಬ್ಬರೂ ಅಮೇರಿಕಾದಿಂದ ಹೊಸ ಕನಸಿನ ಕಣ್ಣುಗಳೊಂದಿಗೆ, ನಿರೀಕ್ಷೆಯೊಂದಿಗೆ ಇಂಡಿಯಾಗೆ ಬಂದಿದ್ದೆವು. ದೆಹಲಿಯ ಅಂತರ್‍ರಾಷ್ಟ್ರೀಯ ಹವ್ಯಾಸಿ ರಂಗತಂಡವೊಂದರಲ್ಲಿ ಅದೂ ಇದೂ ಕೆಲಸ ಮಾಡಿಕೊಂಡಿದ್ದೆವು. ರೆಪರ್ಟರಿ ಸೇರಿ ನಾಲ್ಕು ತಿಂಗಳಾಗಿರಲಿಲ್ಲ, ಯಾವ ಗಳಿಗೆಯಲ್ಲಿ ಇವಳಿಗೆ ಈ ಯೋಚನೆ ಬಂತೋ ಗೊತ್ತಿಲ್ಲ, ‘ಬಿಟ್ಟಿಯಾಗಿ ಇಡೀ ಇಂಡಿಯಾ ಸುತ್ತಬಹುದು, ಅಂಥಾದೊಂದು ಪ್ಲಾನ್ ಮಾಡಿದೀನಿ’ ಅಂದಳು. ಸರಿ ಅಂದುಕೊಂಡು ಯಾರಿಗೂ ಹೇಳದೇ ಕೇಳದೇ ನಮ್ಮದೆಲ್ಲ ಲಗೇಜಿನೊಂದಿಗೆ ಬಂದು ಈ ಸರ್ಕಸ್ ಸೇರಿಕೊಂಡೆವಲ್ಲ? ಸೇರಿದ ವಾರಗಳಲ್ಲೇ ಇವಳ ಹಗ್ಗದ ನೃತ್ಯ ‘ನ್ಯೂ ಜಂಬೋ ಸರ್ಕಸ್’ನ ಪ್ರಮುಖ ಆಕರ್ಷಣೆಯಾಯಿತು, ಆಕಾಶಕ್ಕೆ ಕಟ್ಟಿದಂತಿದ್ದ ಮೃದುವಾಗಿ ಹೆಣೆದ, ಮುಷ್ಟಿ ದಪ್ಪದ ಬಿಳೀ ಹಗ್ಗದ ಮೇಲೆ ಇವಳು ಏರಿದರೆ ಕಿನ್ನರಲೋಕ ಸೃಷ್ಟಿಯಾಗುತ್ತಿತ್ತು. ಒಂದೇ ಕೈಯಲ್ಲಿ ಹಗ್ಗಕ್ಕೆ ಆತುಕೊಂಡು, ಮೈಯನ್ನೆಲ್ಲ ಬಳುಕಿಸಿ, ಸಂಗೀತದ ಏರಿಳಿತಕ್ಕೆ ತಕ್ಕಂತೆ ನುಲಿದಾಡುತ್ತಿದ್ದರೆ ನೋಡುಗರೆಲ್ಲ ಬಿಟ್ಟಬಾಯಿ ಬಿಟ್ಟಂತೇ ಇದ್ದುಬಿಡುತ್ತಿದ್ದರು.

ಸರ್ಕಸ್‌ನಲ್ಲಿ ಇವಳ ಈ ರೋಪ್ ಡ್ಯಾನ್ಸ್ ಪ್ರಸಿದ್ಧವಾದಂತೆ ನನ್ನ ಬಾಟಲಿಗಳ ಜಗಲಿಂಗ್ ಅಷ್ಟೇನೂ ಮುಖ್ಯವಾಗಲಿಲ್ಲ. ನನಗೆ ಬರುತಿದ್ದುದೇ ಅದೊಂದು ಕಸರತ್ತು. ಜೊತೆಗಿರಲಿ ಅಂತ ಮೇಜಿನ ಮೇಲೆ ಉರುಟು–ಉರುಟಾಗಿ, ಹಂತ ಹಂತವಾಗಿ ಜೋಡಿಸಿಟ್ಟ ಕೊಳವೆಗಳ ಮೇಲೆ ಸ್ಕೇಟ್‌ಬೋರ್ಡ್ ಮೇಲೆ ನಿಂತು ಬೀಳದೇ ಹೊಯ್ದಾಡುವ ಕಸರತ್ತನ್ನೂ ಕಲಿತು ಅದನ್ನೂ ನನ್ನ ಆಟದೊಂದಿಗೆ ಸೇರಿಸಿಕೊಂಡೆ. ಆದರೂ ಅದೂ ಅಷ್ಟೇನೂ ಆಕರ್ಷಣೀಯ ಅನ್ನಿಸಲಿಲ್ಲ. ಆದರೂ ಸರ್ಕಸ್‌ನ ಮಾಲೀಕ ನನ್ನನ್ನು ಬದಿಯಲ್ಲಿರಲಿ ಎಂಬಂತೆ ಇಟ್ಟುಕೊಂಡಿದ್ದ. ಯಾಕೆಂದರೆ ಅವನಿಗೆ ಗೊತ್ತಿತ್ತು–ನನ್ನನ್ನು ಹೊರ ಹಾಕಿದರೆ ಇವಳೂ ನನ್ನೊಡನೆಯೇ ಹೊರಟುಬಿಡುತ್ತಾಳೆ!

ಈಗ ಆರು ತಿಂಗಳಿನಿಂದ ಮಾಲೀಕನೊಂದಿಗೆ ಮಾಲೀಕನ ಮಗನೂ ಸರ್ಕಸ್‌ನ ಆಡಳಿತಕ್ಕೆ ಬಂದು ಸೇರಿಕೊಂಡಿದ್ದಾನೆ. ಅವನಿಗೆ ಇವಳ ಮೇಲೆ ಕಣ್ಣು. ಏನಾದರೂ ಮಾಡಿ ನನ್ನನ್ನು ಸರ್ಕಸ್‌ನಿಂದ ಓಡಿಸಬೇಕು, ಇವಳನ್ನು ಇರಿಸಿಕೊಳ್ಳಬೇಕು ಎಂಬ ಹುನ್ನಾರ ಅವನದು. ಅದಕ್ಕಾಗಿಯೇ ಇವಳ ಸಂಬಳ ಹೆಚ್ಚು ಮಾಡಿದ್ದಾನೆ. ಸಮಯ ಸಿಕ್ಕಾಗಲೆಲ್ಲ ಇವಳ ಮುಂದೆ ನನ್ನ ಕಸರತ್ತಿನ ಮೇಲೆ ತನಗಿರುವ ನಿರಭಿಮಾನವನ್ನೂ ಎತ್ತಿ ತೋರಿಸುತ್ತಾನೆ, ಅದನ್ನು ಯಾರು ಬೇಕಾದರೂ ಮಾಡಬಹುದು ಅನ್ನುತ್ತಾನೆ.

ಅದೆಲ್ಲ ಸರಿಯೆನ್ನುವಂತೆ ಇವಳೂ ಸುಮ್ಮನಿರುತ್ತಾಳೆ, ಇವಳಿಗೆ ತನ್ನ ರೋಪ್ ಡ್ಯಾನ್ಸ್ ಮೇಲೆ ಎಲ್ಲಿಲ್ಲದ ಪ್ರೀತಿಯಿರೋದು ನಿಜ, ಆದರೆ ನನ್ನ ಹಿಯಾಳಿಕೆ ನೋಡಿಯೂ ‘ಈ ಸರ್ಕಸ್‌ನಲ್ಲೇ ಬದುಕು ಕಂಡುಕೊಳ್ಳಬಹುದು’; ಬಿಟ್ಟು ಹೋಗೋಣವೆಂದರೆ ‘ಇದಕ್ಕಿಂತ ಉತ್ತಮ ಅವಕಾಶ, ದುಡಿಮೆ ನಮಗೆ ಸಿಗಲಾರದು’ ಅನ್ನುತ್ತಾಳೆ. ಇದನ್ನೆಲ್ಲ ನೋಡುತ್ತಿದ್ದರೆ ನನಗೆ ಸಾಯುವಷ್ಟು ಭಯವಾಗುತ್ತದೆ. ಇವಳು ನನ್ನ ಪ್ರೀತಿಯ ಪರಿಧಿಯಿಂದ ಹೊರ ಹಾರಲು ಯತ್ನಿಸುತ್ತಿದ್ದಾಳೋ, ಅಥವಾ ನಾನೇ ಇವಳ ಪ್ರೀತಿಯ ಪರಿಧಿಯಿಂದ ಯಾವಾಗಲೋ ಉಚ್ಛಾಟನೆಗೊಳಗಾಗಿದ್ದೇನೆಯೋ ಎಂದೆಲ್ಲ ಅನಿಸಿ ದಿಗಿಲಾಗುತ್ತದೆ.

ಅದಕ್ಕೇ ನಾನೀಗ ಸರ್ಕಸ್ಸಿನಲ್ಲಿ ಮಾಡಬಹುದಾದ ಹೊಸದೊಂದು ಕಸರತ್ತಿನ ಯೋಚನೆ ಮಾಡ್ತಾ ಇದ್ದೇನೆ. ಈ ಕಸರತ್ತು ನೋಡಿದರೆ ಮಾಲೀಕನ ಮಗನಷ್ಟೇ ಅಲ್ಲ, ಮಾಲೀಕನೂ ಕೂಡಾ ನನ್ನ ಕಾಲಿಗೆ ಬಿದ್ದು ಬಿಡುತ್ತಾನೆ, ಆಮೇಲೆ ನಾನೂ, ನನ್ನ ಕಸರತ್ತೂ ಇವಳ ರೋಪ್ ಡ್ಯಾನ್ಸನಷ್ಟೇ ಸರ್ಕಸ್ಸಿಗೆ ಬೇಕಾದವರಾಗಿಬಿಡುತ್ತೇವೆ. ಆಮೇಲೆ ನನ್ನನ್ನು ಸರ್ಕಸ್ಸಿನವರು ಕಾಲ ಕಸದಂತೆ ನೋಡುವ ಮಾತೇ ಇಲ್ಲ. ಅದಕ್ಕಿಂತ ಮುಖ್ಯವಾಗಿ ನಾನು ಇವಳ ಪ್ರೀತಿಗೆ ಅರ್ಹನಾಗುತ್ತೇನೆ, ಇವಳಿಗೋಸ್ಕರ ನಾನು ಏನು ಬೇಕಾದರೂ ಮಾಡಬಲ್ಲೆ ಎಂಬುದು ಇವಳಿಗೆ ಗೊತ್ತಾದರೆ ಸಾಕು. ನಾನು ಇದರಲ್ಲಿ ಸಫಲನಾಗ್ತೀನಾ? ಗೊತ್ತಿಲ್ಲ!

<u>ಅವಳು</u>

ಇವನಿಗೆ ಹೇಳಿ ಹೇಳಿ ಸಾಕಾಯ್ತು, “ಎಲ್ಲಾದರೂ ಹೋಗಿಬಿಡೋಣ. ಈ ಸರ್ಕಸ್ ಅಷ್ಟೇ ನಮ್ಮ ಜೀವನವಲ್ಲ! ಇದನ್ನು ಬಿಟ್ಟು ಬೇರೆ ಬದುಕು ಕಟ್ಟಿಕೊಳ್ಳೋಣ!” ಆದರೆ ಇವನದು ಒಂದೇ ಉತ್ತರ, “ಸರ್ಕಸ್ ಬಿಟ್ಟರೆ ನಮಗೆ ಜೀವನವೇ ಇಲ್ಲ!”

ಮೊದಲೆಲ್ಲ ಇವನು ಹೀಗಿರಲಿಲ್ಲ. ಅಮೇರಿಕದಲ್ಲಿ ಅನಾಥಳಾಗಿ, ಫೊಸ್ಟರ್ ಹೋಂಗಳಲ್ಲಿ ಬೆಳೆದುಕೊಂಡು, ಪರ್ಫಾರ್ಮಿಂಗ್ ಆರ್ಟ್ಸ್ ಅಂತೆಲ್ಲ ಕಲಿತುಕೊಂಡು, ಸ್ಯಾನ್ ಹ್ಯೂಸ್‌ನ ಒಂದು ರೆಪರ್ಟರಿಯಲ್ಲಿ ನೃತ್ಯ-ನಾಟಕ ಅಂತ ಮಾಡಿಕೊಂಡಿದ್ದವಳು, ಯಾವುದೋ ಬೇರೆ ರಾಜ್ಯದಿಂದ ನಟನಾ-ಶಿಬಿರಕ್ಕೆಂದು ಬಂದಿದ್ದ ಇವನ ಕಣ್ಣಿಗೆ ಬಿದ್ದೆ ನೋಡಿ, ಇವನ ಕಣ್ಣ ದೀಪ ನಾನಾಗಿ ಹೋದೆ. ಮುಂದೆ ನಡೆದದ್ದೆಲ್ಲ ಕನಸೇ ನಿಜ. ಇಬ್ಬರೂ ತಂತಮ್ಮ ತಂಡಗಳನ್ನು ತೊರೆದು, ಅಲ್ಲಿ, ಇಲ್ಲಿ ಕೆಲಸ ಮಾಡುತ್ತ, ಇಡೀ ದೇಶವನ್ನೆಲ್ಲ ಅಲೆದಾಡುತ್ತ ಅಲೆಮಾರಿಗಳ ಜೀವನ ಸಾಗಿಸುತ್ತಿದ್ದಾಗಲೂ ನಾನೇ ಇವನ ಮೈಮನದ ತುಂಬ ಮತ್ತು ನನ್ನ ಮೈಮನಕ್ಕೆಲ್ಲ ಇವನ ಪ್ರೀತಿಯದ್ದೇ ಬೆಚ್ಚಗಿನ ಹೊದಿಕೆ. ಆಮೇಲೆ ನನ್ನ ತಲೆಗೆ ಬಂದ ಹುಚ್ಚು ಯೋಜನೆಯಂತೆ ಇಂಡಿಯಾಕ್ಕೆ ಬಂದು, ದೆಹಲಿಯ ರೆಪರ್ಟರಿಯೊಂದಲ್ಲಿ ಕೆಲಸ ಮಾಡುತ್ತಿದ್ದಾಗಲೂ ನನ್ನ-ಇವನ ಪ್ರೀತಿ ಪೂರ್ಣಚಂದ್ರನೇ. ಆ ನಂತರ ನನ್ನ ಇನ್ನೊಂದು ಹುಚ್ಚು ಯೋಚನೆಯಂತೆ ಈ ಸರ್ಕಸ್ ಸೇರಿಕೊಂಡು ದೇಶವನ್ನೆಲ್ಲ ಸುತ್ತಲಾರಂಭಿಸಿದೆವು ನೋಡಿ, ಇವನು ಮೌನಿಯಾಗಲಾರಂಭಿಸಿದ. ಮನದ ಮಾತುಗಳಿಗೆಲ್ಲ ಮೌನದ ತೆರೆ. ಮೌನದಲ್ಲೂ ಒಬ್ಬರನೊಬ್ಬರು ಅರಿಯುತ್ತಿದ್ದವರಿಗೆ ಈ ಹೊಸ ಮೌನ ಅರ್ಥವಾಗಲಿಲ್ಲ.

ಈಗ ಪುಣೆಗೆ ಬಂದು ಹದಿನೈದು ದಿನಗಳಾದವು. ನಗರದ ನಟ್ಟ ನಡುವೆ ಅಗಲವಾಗಿ, ಕೊಳಕಾಗಿ ಹರಿಯುವ ಮುತ್ತಾ ನದಿಯ ಎಡದಂಡೆಯ ಮಣ್ಣುದಿಬ್ಬದ ಮೇಲೆ, ನದಿಯನ್ನು ಅಡ್ಡಡ್ಡ ಭಾಗಮಾಡಿರುವ ಸೇತುವೆಗಳೊಂದರ ಕೆಳಗೆ, ಡೇರೆ ಹಾಕಿಕೊಂಡೆವು. ನಗರದ ಬೀದಿಗಳಲೆಲ್ಲ ಪ್ರಚಾರಕ್ಕೆಂಬಂತೆ ಪೋಸ್ಟರುಗಳನ್ನಂಟಿಸಿ, ಕವಾಯಿತು ಮಾಡಿ, ಸರ್ಕಸ್ ಶುರುವಾಗಿ ಮೂರನೇ ದಿನಕ್ಕೆ ಇವನು ಮಾಲೀಕರ ಬಳಿ, ತಾನೊಂದು ಹೊಸ ರೀತಿಯ ಕಸರತ್ತು ಮಾಡುವುದಾಗಿ ಹೇಳಿದಾಗ ನನಗೆ ದಿಗ್ಭ್ರಮೆಯಾಯ್ತು. ಇಪ್ಪತ್ತನಾಲ್ಕು ಗಂಟೆ ನನ್ನೊಂದಿಗೆ ನನ್ನ ನೆರಳಾಗಿದ್ದವನು, ಒಮ್ಮೆಯಾದರೂ ನನ್ನ ಬಳಿ ತನ್ನ ಹೊಸ ಕಸರತ್ತಿನ ಬಗ್ಗೆ ಮಾತನಾಡಿರಲಿಲ್ಲ. ಎಷ್ಟು ದಿನಗಳಿಂದ ಯೋಚಿಸುತ್ತಿದ್ದನೋ? ವರ್ಷಕಾಲದ ರೂಢಿಯಂತೆ ಈಗಲೂ ದಿನಾ, ಸರ್ಕಸ್‌ನ ಕೊನೆಯ ಆಟ ಮುಗಿದ ಮೇಲೆ ಕೈಯಲ್ಲಿ ಪೆಪ್ಸಿ ಹಿಡಿದುಕೊಂಡು, ಸರ್ಕಸ್ಸಿನ ಮುಂದೆ, ಮೂಲೆಯಲ್ಲಿದ್ದ ನೀರಿನ ವ್ಯಾನಿನ ಟ್ಯಾಂಕರ್‌ನ ಮೇಲೆ ಕುಳಿತು, ಅಳಿದುಳಿದ ಮಾತುಗಳನ್ನು ಜತನದಿಂದ, ಬಹು-ಪ್ರಯತ್ನದಿಂದ ಮಾತನಾಡಿಕೊಳ್ಳುತ್ತಿದ್ದವರು ಅವತ್ತು ಡೇರೆಯಿಂದ ಹೊರಬರಲೇ ಇಲ್ಲ. ಮತ್ತು ಯಾವಾಗಲೂ ಇವನ ಮಡಿಸಿದ ತೋಳಿನ ಮೇಲೆ ತಲೆಯಿಟ್ಟು, ಗರ್ಭಸ್ಥ ಮಗುವಿನಂತೆ ಮಲಗುತ್ತಿದ್ದವಳು ಅವತ್ತು ರಾತ್ರಿ ಮೊದಲ ಬಾರಿಗೆ ಸುಮ್ಮನೇ ದೂರ ಮಲಗಿದೆ. ನಿದ್ದೆ ಬರದೇ ಹೊರಳಾಡಿದೆ. ಅತ್ತ ತಿರುಗಿ ಮಲಗಿದವನಿಗೆ ನಿದ್ದೆ ಬಂದಿತ್ತಾ? ಗೊತ್ತಾಗಲಿಲ್ಲ.

ಮಾರನೆಯ ದಿನ ಅವನ ಹೊಸ ಕಸರತ್ತಿನ ಮೊದಲನೇ ರಿಹರ್ಸಲ್ ನೋಡಿದ ಕೂಡಲೇ ನನ್ನೆದೆ ಬಾಯಿಗೆ ಬಂದಂತಾಯ್ತು. ಅಷ್ಟು ಎತ್ತರದಿಂದ ಜಿಗಿಯುವುದು ಅಂದರೆ ತಮಾಷೆಯ ಮಾತೇ? ಆದರೆ ಇವನ ಪ್ರದರ್ಶನ ನೋಡಿ ನನಗೆ ಹೆದರಿಕೆಯಾದಷ್ಟು ಅಲ್ಲಿದ್ದ ಸರ್ಕಸ್ಸಿನ ಜನರಿಗೆ ಹೆದರಿಕೆಯಾಗಲಿಲ್ಲ. ಎಲ್ಲರೂ ಹೊಸ ಹುರುಪಿನೊಂದಿಗೆ ಚಪ್ಪಾಳೆ ತಟ್ಟಿದರು, ಹೊಸಾ ತರಹದ ಪ್ರಯೋಗ ಅಂದರು, ಕೆಲವರಂತೂ ಅದೂವರೆಗೂ ಸರ್ಕಸ್‌ನ ಅತ್ಯಂತ ಅಪಾಯಕಾರಿ ಕಸರತ್ತೆನಿಸಿಕೊಂಡಿದ್ದ 'ಡೆತ್ ಟ್ರ್ಯಾಪ್'ನ ಮೋಟಾರ್ ಬೈಕ್ ಸವಾರಿಗಿಂತಲೂ ಇದು ಹೆಚ್ಚು ಅಪಾಯಕಾರಿ ಅಂದುಬಿಟ್ಟರು. ನಮ್ಮ ಮಾಲೀಕ ನಿಂತಲ್ಲೇ ಈ ಹೊಸ ಕಸರತ್ತನ್ನು ಒಪ್ಪಿಕೊಂಡ, ಇವನ ಸಂಬಳ ಎರಡು ಸಾವಿರ ರುಪಾಯಿ ಹೆಚ್ಚಿಸಿದ, ಹತ್ತು ದಿನದ ತಾಲೀಮಿನ ನಂತರ ಸೋಮವಾರಕ್ಕೆ ಮೊದಲ ಪ್ರದರ್ಶನ ಕೊಡೋಣ, ಹೊಸದಾಗಿ ಕರಪತ್ರಗಳನ್ನು ಮುದ್ರಿಸಿ ಪ್ರಚಾರ ಮಾಡೋಣ ಅಂದ. ಮಾಲೀಕನ ಮಗನ ಕಣ್ಣಲ್ಲಿ ಅಸಹನೀಯತೆಯ ನೆರಳು. 'ಇನ್ನುಳಿದ ರಿಹರ್ಸಲ್‌ಗಳಿಗೆ ಪೆಟ್ರೋಲ್ ಬೇಡ, ತುಟ್ಟಿಯಾಗುತ್ತದೆ; ನೇರವಾಗಿ ಹತ್ತು ದಿನದ ನಂತರ ನಡೆಯುವ ಮೊದಲ ಪ್ರದರ್ಶನಕ್ಕೆ ಇದ್ದರೆ ಸಾಕು' ಅಂತಾ ಮಾಲೀಕ ಹೇಳಿದಾಗ ನನಗೆ ಸಧ್ಯಕ್ಕೆ ಜೀವ ಬಂದಂತಾದರೂ ಅದರಿಂದ ಪ್ರದರ್ಶನದ ದಿನದ ದಿಗಿಲೇನು ಕಡಿಮೆಯಾಗಲಿಲ್ಲ. ಅವತ್ತೇ ನಿರ್ಧರಿಸಿದೆ, 'ಈ ಸರ್ಕಸ್ ಬೇಡ!' ಆದರೆ ಇವನು ಕೇಳುತ್ತಲೇ ಇಲ್ಲ. ಇವನಿಗೆ ಏನನ್ನೋ ಸಾಧಿಸಿ ತೋರಿಸಬೇಕಾಗಿದೆಯಂತೆ, ಪುರಾವೆ ಕೊಡಬೇಕಾಗಿದೆಯಂತೆ! ಯಾರಿಗೆ ಎಂಬ ಪ್ರಶ್ನೆಗೆ ಇವನದು ಮೌನವೇ ಉತ್ತರ.

ಈಗಾಗಲೇ ಒಂಬತ್ತು ದಿನಗಳಾದವು, ಅವನ ಪ್ರತೀದಿನದ ತಾಲೀಮಿನ ಸಮಯದಲ್ಲಿ ನನ್ನ ಜೀವವೆಲ್ಲ ನನ್ನ ಕಣ್ಣುಗಳಲ್ಲಿಯೆ! ನಾಳೆಯೇ ಮೊದಲ ಪ್ರದರ್ಶನ. ಆಗಲೇ ಹೊಸಾ ಕರಪತ್ರಗಳು, ಪೋಸ್ಟರ್ಸ್, ಪ್ರಚಾರ ಎಲ್ಲವೂ ಆಗಿದೆ. ಇವತ್ತಾದರೂ ಅವನೊಂದಿಗೆ ಮಾತನಾಡದಿದ್ದರೆ, ನಾಳೆ ನಾನು ನಾನಾಗಿ ಇರ್ತೀನಾ? ಅವನು ಅವನಾಗಿ ಇರ್ತಾನಾ? ಗೊತ್ತಿಲ್ಲ!

--------

ಸಮಯ ರಾತ್ರಿಯ ಹನ್ನೊಂದಾಗುತ್ತಿತ್ತು. ಭಾನುವಾರದ ಕೊನೆಯ ಸರ್ಕಸ್ ಪ್ರದರ್ಶನ ಮುಗಿದು, ಇಬ್ಬರೂ ಸರ್ಕಸ್ ಡೇರೆಯ ಮುಂದೆ ಇದ್ದ ಸರ್ಕಸ್ಸಿನದೇ ಆದ ತಿಂಡಿಯಂಗಡಿಯಲ್ಲಿ ಒಂದೊಂದು ಪೆಪ್ಸಿಯ ಕ್ಯಾನ್‌ಗಳನ್ನು ತೆಗೆದುಕೊಂಡು, ಅದನ್ನು ಅವನ ಲೆಕ್ಕಕ್ಕೆ ಬರೆಸಿ, ಅಂಗಡಿಯ ಪಕ್ಕದಲ್ಲೇ ನಿಲ್ಲಿಸಿದ್ದ ಕುಡಿಯುವ ನೀರಿನ ವ್ಯಾನಿನ ಕಬ್ಬಿಣದ ಟ್ಯಾಂಕಿಯ ಮೇಲೆ ಕುಳಿತಿದ್ದರು.

"ನಾಳೇನೇ ನಿನ್ನ ಮೊದಲ ಶೋ!"

ತಲೆಯೆತ್ತಿ ತನ್ನ ಕ್ಯಾನಿನ ಪೆಪ್ಸಿ ಕುಡಿಯುತ್ತಿದ್ದವನು ಅದನ್ನು ಕೆಳಗಿಸಿ ನುಡಿದ, "ಮ್... ಹೌದು!"

"ಅದನ್ನು ಮಾಡ್ದೇ ಇರೋಗೋಲ್ವಾ?"

ಅವನು ದೂರದಲ್ಲಿ, ನದಿಯ ಆ ಅಂಚಿನಲ್ಲಿ ಕಟ್ಟಡಗಳು, ಹೊಳೆಯುತ್ತಿದ್ದ ದೀಪಗಳನ್ನೇ ನೋಡುತ್ತಾ ಕೇಳಿದ,

"ಯಾಕೆ?"

"ಯಾಕೋ, ನನಗಿಷ್ಟವಾಗ್ತಿಲ್ಲ!"

"ನಿನಗಿಷ್ಟವಾಗ್ತಿಲ್ಲ, ಅಂದ್ರೆ?"

ಅವಳು ನಿಟ್ಟುಸಿರು ಬಿಟ್ಟು, ಅವನ ದೃಷ್ಟಿಯನ್ನೇ ಅರಸುತ್ತ, ಅವೇ ಕಟ್ಟಡಗಳನ್ನು ನೋಡುತ್ತ ಎರಡನೇ ಪ್ರಶ್ನೆ ಕೇಳಿದಳು, "ನಿನಗಿಷ್ಟವಾಗದೇ ಇದ್ದ ಯಾವುದಾದರೂ ಕೆಲಸ ನಾನು ಮಾಡಿದ್ದೀನಾ?" ಸುಮ್ಮನಿದ್ದ ಅವನನ್ನು ಕೊನೆಯದೊಂದು ಪ್ರಶ್ನೆ ಕೇಳಿದಳು, "ನೀನು ನನ್ನ ಪ್ರೀತಿಸ್ತೀಯಾ?"

"ಮೊದಲು ಹೇಳು, ನೀನು ನನ್ನ ಪ್ರೀತಿಸ್ತೀಯಾ?"

"ಯಾಕೆ ಅನುಮಾನ?"

"ಅನುಮಾನ ಅಲ್ಲ, ಹೇಳು!"

"ಹೌದು!"

"ಯಾಕೆ?"

"ಯಾಕೇಂದ್ರೆ ಏನು?"

"ನನ್ನನ್ನೇ ಯಾಕೆ ಪ್ರೀತಿಸ್ತೀಯಾ?"

"ಪ್ರೀತಿ ಹುಟ್ಟೋದಕ್ಕೆ ಕಾರಣಗಳೇ ಬೇಕಾಗಿದ್ದರೆ ನಾನು ನಿನ್ನನ್ನು ಪ್ರೀತಿಸುತ್ತಲೇ ಇರಲಿಲ್ಲ!"

"ಅಂದ್ರೆ? ನಿನ್ನರ್ಥ ನಾನು ನಿನ್ನ ಪ್ರೀತಿಗೆ ಅರ್ಹ ಅಲ್ವೇ?" ಕಾತರನಾಗಿ ಅವನು ಕೇಳಿದ ಪ್ರಶ್ನೆಗೆ ಅವಳು ನಕ್ಕಳು.

"ನೋಡು, ನನ್ನೊಂದು ಮಾತನ್ನೂ ಹೇಗೆಲ್ಲ ಅರ್ಥ ಮಾಡ್ಕೋತೀಯ ನೀನು. ನಾನು ಹೇಳಿದ್ದು ಪ್ರೀತಿಗೆ ಕಾರಣಗಳೇ ಬೇಕಾಗಿದ್ದರೆ ನಾನು ಬೇರೆ ಯಾರನ್ನಾದರೂ ಪ್ರೀತಿಸಬಹುದಾಗಿತ್ತು. ಸ್ಯಾನ್ ಹ್ಯೂಸ್‌ನಲ್ಲಿ ನೀನು ನನ್ನ ಮುಂದೆ ಸುಳಿಯುವ ತನಕ ಕಾಯುವ ಅಗತ್ಯವೇ ಇರಲಿಲ್ಲ. ದುಡ್ಡು, ಶ್ರೀಮಂತಿಕೆ, ಕೆಲಸ, ಮ್... ಜೊತೆಗೆ ನಿನಗಿಂತ ಲಕ್ಷಣವಾಗಿರೋ ಹುಡುಗರು..." ಅವನು ಮುಖ ಊದಿಸಿಕೊಂಡದ್ದನ್ನು ನೋಡಿಯೂ ಮುಂದುವರಿಸಿದಳು, "...ಅವೆಲ್ಲ ಕಾರಣಗಳಿಂದ ಪ್ರೀತಿ ಹುಟ್ಟುತ್ತದೆ ಅನ್ನುವುದಾದರೆ ನೀನು ಬಂದು ರೆಪರ್ಟರಿಯಲ್ಲಿ ನನ್ನನ್ನು ಕಾಣುವ ಮೊದಲೇ ನಾನು ಇನ್ಯಾರದ್ದೋ ಪ್ರೀತಿಯಲ್ಲಿ ಕೊಚ್ಚಿ ಹೋಗಿರುತ್ತಿದ್ದೆ."

ಅವನು ತುಂಬಾ ಗಮನಕೊಟ್ಟು ಅವಳ ಮಾತುಗಳನ್ನೇ ಕೇಳುತ್ತಿರುವವನಂತೆ, "ಆಮೇಲೆ?" ಅಂದ.

"ಆಮೇಲೇನು? ನೀನು ನನ್ನನ್ನು ಪ್ರೀತಿಸ್ತೀನಿ ಅಂತಾ ಹೇಳ್ತಾನೂ ಇರ್ಲಿಲ್ಲ, ನಾನು ಒಪ್ಕೋತಾನೂ ಇರ್ಲಿಲ್ಲ, ನಾವಿಬ್ಬರೂ ಹೊಸ ಕನಸು ಕಟ್ಕೊಂಡು ಇಂಡಿಯಾಗೆ ಬರ್ತಾನೂ ಇರ್ಲಿಲ್ಲ..." ಅವಳ ಮಾತನ್ನು ಅವನು ಪೂರೈಸಿದ, "...ಈ ಕೆಟ್ಟ ಸರ್ಕಸ್ ಕಂಪನಿಯನ್ನು ಸೇರ್ಕೋತಾನೂ ಇರ್ಲಿಲ್ಲ!" ತನ್ನ ಕೈಯಲ್ಲಿದ್ದ ಪೆಪ್ಸಿ ಕ್ಯಾನನ್ನು ಬಲಹಾಕಿ ಕೈಯಲ್ಲೇ ಮುದುರಿದ. ಅವಳು ತನ್ನ ಪೆಪ್ಸಿ ಕ್ಯಾನನ್ನು ಪಕ್ಕದಲ್ಲೇ ಕಟ್ಟೆಯ ಮೇಲಿಟ್ಟುಕೊಂಡು ಅವನ ತೊಡೆಯ ಮೇಲಿದ್ದ ಅವನೆರೆಡು ಕೈಗಳನ್ನೂ ತನ್ನ ಕೈಗಳಲ್ಲಿ ತೆಗೆದುಕೊಂಡಳು, ಹತ್ತು ದಿನದ ಹಿಂದಿನ ಮೊದಲನೇ ರಿಹರ್ಸಲ್‌ನಲ್ಲಿ ಸ್ವಲ್ಪ ಉರಿ ತಾಕಿ, ಬೊಬ್ಬೆ ಬಂದು ಒಡೆದು ಹೋಗಿದ್ದ ಕಿರುಬೆರಳ ಮೇಲಿನ ಗಾಯವನ್ನು ಸವರಿದಳು. "ಈವಾಗಲೂ ನೀನು ಈ ಕಸರತ್ತು ಮಾಡಲೇ ಬೇಕೆ? ಇದನ್ನೆಲ್ಲ ಬಿಟ್ಟು ಹೊಸ ಜೀವನ ನಮ್ಮದಾಗಿಸಿಕೊಳ್ಳೋದಕ್ಕೆ ನಮಗೆ ಸಾಧ್ಯವಿಲ್ಲವೇ?"

ಅವನು ಹಾಗೇ ಕತ್ತಲಲ್ಲಿ ಕೊಳಕನೆಲ್ಲ ಬಚ್ಚಿಟ್ಟುಕೊಂಡು ಹರಿಯುತ್ತಿದ್ದ ಮುತ್ತಾ ನದಿಯನ್ನೇ ನೋಡುತ್ತಿದ್ದ. ಅವಳು ಕಂಪಿಸುವ ಧ್ವನಿಯಲ್ಲಿ ಮೆಲ್ಲನುಸುರಿದಳು, "ಐ ಲವ್ ಯೂ..."

ಅವನು ಅವಳೆಡೆಗೆ ತಿರುಗಿ ಅವಳ ಕಣ್ಣುಗಳಾಳದ ಭಾವಗಳಲ್ಲಿ ತನ್ನ ಪ್ರತಿಬಿಂಬವನ್ನು ಹುಡುಕುವಂತೆ ದಿಟ್ಟಿಸಿದ. "ಐ ಲವ್ ಯೂ ಟೂ" ಇಬ್ಬರ ಕಣ್ಣುಗಳಲ್ಲೂ ನೀರಿನೊರತೆಯ ಫಳಫಳ. ಅವಳು ನುಡಿದಳು, "ಆದ್ರೆ ಪ್ರತೀ ದಿನ, ಪ್ರತೀ ಸಲ, ನನ್ನ ಪ್ರೀತಿಗೆ ಪುರಾವೆ ಕೊಡು ಅಂದ್ರೆ ಮಾತ್ರ ಕಷ್ಟ!" ಅವನು ನಕ್ಕ, ಅವಳೂ ನಕ್ಕಳು. ನಕ್ಕು ಇಬ್ಬರೂ ಕಣ್ಣೊರೆಸಿಕೊಂಡರು. ಅವಳು ನುಡಿದಳು, "ಯಾರು ಹೇಳಿದ್ದು ಹುಡುಗರು ಭಾವನಾತ್ಮಕವಾಗಿ ತುಂಬಾ ಗಟ್ಟಿ, ಅವರಿಗೆ ಆಸರೆಯೇ ಬೇಡ ಅಂತಾ..."

ಅವರಿಬ್ಬರೂ ಅಲ್ಲಿ ಬಹಳ ಹೊತ್ತು ಹಾಗೇ ಮಾತನಾಡುತ್ತಾ ಕುಳಿತಿದ್ದರು.

ನಂತರ, ಇಡೀ ಪುಣೆಯೆಲ್ಲ ಮಲಗಿದ ಮೇಲೆ, ಮೂರನೇ ಪ್ರಹರದಲ್ಲಿ ತಾವು ಮಲಗಿದ್ದ ಸರ್ಕಸ್ಸಿನ ಡೇರೆಯೊಳಗಿಂದ ತಮ್ಮದೆಲ್ಲ ಪ್ರಪಂಚವನ್ನು ಅವರಿಬ್ಬರೂ ಎರಡು ಬ್ಯಾಕ್‌ಪ್ಯಾಕ್‌ಗಳಲ್ಲಿ ತುಂಬಿಕೊಂಡರು. ಸ್ವೆಟರ್-ಉಲನ್ ಟೋಪಿ ಹಾಕಿಕೊಂಡು, ಯಾರಿಗೂ ಗೊತ್ತಾಗದಂತೆ ಸಡಿಲವಾಗಿದ್ದ ಒಂದು ಕಬ್ಬಿಣದ ಹಲಗೆ ಸರಿಸಿ, ಸರ್ಕಸ್ಸಿನ ಎಡಮೂಲೆಯಿಂದ

ಹೊರಬಂದರು. ನಂತರ ಕೊಳಕು ವಾಸನೆ ತುಂಬಿದ್ದ ಎಡಭಾಗದ ಸೇತುವೆಯ ಕಂಬಗಳ ನಡುವೆ ಲಗುಬಗೆಯಿಂದ ಹೆಜ್ಜೆಹಾಕುತ್ತ, ಅದೇ ಸೇತುವೆಯನ್ನೇರಿದರು. ಸೇತುವೆಯ ಮೇಲೆ ನಡೆಯುತ್ತ ನದಿಯ ಆ ಕಡೆ ಸಾಗಲಾರಂಭಿಸಿದಾಗ ಅವಳು ಅವನ ಕೈ ತಡೆದಳು. ಅವನು ಹಿಂತಿರುಗಿ ಅವಳು ನೋಡುತ್ತಿದ್ದ ದೃಷ್ಟಿಯನ್ನೇ ಹಿಂಬಾಲಿಸಿದ. ಇಬ್ಬರಿಗೂ ಸೇತುವೆಯ ಕೆಳಗೆ ಸೋತು ಸೊರಗಿದ್ದ–ಕೊಳಕಾಗಿದ್ದ ಮುತ್ತಾ ನದಿಯ ಎಡಭಾಗದ ಮರಳು–ಬಯಲಿನ ಮೇಲೆ ನಿಂತಿದ್ದ ಸರ್ಕಸ್‌ನ ದೊಡ್ಡ ಡೇರೆ; ಕಬ್ಬಿಣದ ಹಲಗೆಗಳನ್ನು ನಿಲ್ಲಿಸಿ ಮಾಡಿದ್ದ ಅದರ ದೊಡ್ಡ ಹೊರ ಪ್ರಾಕಾರ; ಅದರ ಎಡಗಡೆಗಿದ್ದ, ತಾವು ಈಗ ತಾನೇ ಹತ್ತಿಬಂದಿದ್ದ ಇದೇ ಸೇತುವೆಯ ಒಂದು ಮಗ್ಗುಲು; ಮುಂದುಗಡೆ ಪ್ರವೇಶ ದ್ವಾರದಲ್ಲಿ ಮಾತ್ರ ಉರಿಯುತ್ತಿದ್ದ ದೀಪಗಳು; ಈ ಸೇತುವೆಗೆ ಸಮಾನವಾಗಿ, ದೂರದಲ್ಲಿ ಪುಟ್ಟದಾಗಿ ಕಾಣುತ್ತಿದ್ದ ಇನ್ನೆರಡು ಸೇತುವೆಗಳು; ಅವುಗಳ ಮೇಲೆ ಆಗೊಂದು ಈಗೊಂದು ಸುಳಿದಾಡುತ್ತಿರುವ ವಾಹನಗಳು; ಅವುಗಳ ಮಿಣುಕು ಬೆಳಕು ಎಲ್ಲವೂ ಈ ಹಳೇ ರಾತ್ರಿ–ಹೊಸ ಹಗಲಿನ ಸಂಧಿ ಕಾಲದಲ್ಲಿ ಚಿತ್ರಪಟಕ್ಕಿಂತ ಸ್ತಬ್ದವಾಗಿ, ಚಪ್ಪಟೆಯಾಗಿ ತೋರಿದವು.

"ನಿಂಗೊತ್ತಾ? ನೀನು ಆ ಕಸರತ್ತು ಮಾಡ್ತೀಯ ಅಂತ ಗೊತ್ತಾದಾಗ ನನಗೆ ಎಷ್ಟು ಭಯವಾಗಿತ್ತು ಅಂತಾ? ಮೊದಲ ದಿನದ ಪ್ರಾಕ್ಟೀಸ್ ನೋಡಿದ ಮೇಲಂತೂ ನಿನ್ನನ್ನೂ, ನಿನ್ನೊಂದಿಗೆ ಕಂಡಿದ್ದ ನನ್ನೆಲ್ಲ ಕನಸುಗಳನ್ನೂ ಯಾವುದಾದರೊಂದು ದಿನ ಒಂದೇ ಸೆಕೆಂಡಿನಲ್ಲಿ ಕಳಕೊಂಡು ಬಿಡ್ತೀನಿ ಅನಿಸಿಬಿಟ್ಟಿತು. ನನ್ನೆಲ್ಲ ಕನಸುಗಳೂ ನಿನ್ನವೇ ಅಂದಮೇಲೆ, ಅವೆಲ್ಲವನ್ನು ಕಳೆದುಕೊಂಡು ಬದುಕೋದಾದ್ರೂ ಹೇಗೇಂತ ಹೆದರಿಕೆಯಾಯ್ತು."

"ಅಂಥಾದ್ದೇನೂ ಆಗ್ತಿರ್ಲಿಲ್ಲ ಬಿಡು, ಬರೀ ಐವತ್ತು ಅಡಿಯಿಂದ ನೀರಿನ ತೊಟ್ಟಿಯೊಳಕ್ಕೆ ಜಿಗಿಯೋದು ತಾನೇ? ನಾನೆಷ್ಟು ಒಳ್ಳೇ ಡ್ರೈವರ್ ಅಂತಾ ನಿಂಗೇ ಗೊತ್ತಲ್ಲಾ, ಬೇಕಿದ್ದರೆ ಎಪ್ಪತ್ತು ಅಡಿ..."

ಅವನ ಮಾತುಗಳನ್ನು ತುಂಡರಿಸಿ ಅವಳು ನುಡಿದಳು, "ಹೌದು, ನೀನು ದಿ–ಬೆಸ್ಟ್–ಡ್ರೈವರ್ ಅಂತಾ ಗೊತ್ತು, ಆದ್ರೆ ಐವತ್ತು ಅಡಿ ಕೆಳಗಿದ್ದ ತೊಟ್ಟಿಯಲ್ಲಿ ತುಂಬಿದ ನೀರಿನ ಮೇಲೆ ಧಗಧಗ ಉರಿಯುತ್ತಿರುವ ಪೆಟ್ರೋಲ್‌ನ ಜ್ವಾಲೆಗಳಿದ್ದವಲ್ಲ, ನನ್ನ ಆಕ್ಷೇಪವೆಲ್ಲ ಅದರ ಮೇಲೆ ಇದ್ದುದು, ಅದಲ್ಲದೇ ನೀನು ಜಿಗಿಯುವ ನೀರಿನ ತೊಟ್ಟಿಯೇನು ಸ್ವಿಮ್ಮಿಂಗ್ ಪೂಲ್‌ನಷ್ಟು ಅಗಲವಿತ್ತೇ? ಎಲ್ಲಾದರೂ ಲೆಕ್ಕಾಚಾರ ತಪ್ಪಿ, ತೊಟ್ಟಿಯ ಅಂಚಿಗೋ, ಹೊರಕ್ಕೋ ಬಿದ್ದಿದ್ದರೆ?..." ಮೈ ನಡುಕ ಬಂದಂತಾಗಿ ಉಸಿರೆಳೆದುಕೊಂಡಳು. ಅವನು ಅವಳ ಬಲಗೈ ತನ್ನ ಎಡಗೈಯಲ್ಲಿ ಹಿಡಿದುಕೊಂಡು ಅದುಮಿ, ಮುಂದೆ ಹೋಗೋಣವೆಂಬಂತೆ ಎಳೆದ. ಅವಳು ಖುಷಿಯ ನಿಟ್ಟುಸಿರು ಬಿಟ್ಟು ಅವನೊಂದಿಗೆ ಹೆಜ್ಜೆ ಹಾಕುತ್ತ ನುಡಿದಳು, "... ಅಲ್ಲದೇ, ನೀನು ಒಳ್ಳೆಯ ಡ್ರೈವರ್‌ಗಿಂತ ಹೆಚ್ಚಾಗಿ ದಿ–ಬೆಸ್ಟ್–ಜಗಲರ್!"

"ಯಾವುದಾದ್ರೂ ರೆಸ್ಟುರಾಂಟ್, ಕ್ಲಬ್, ಪಬ್‌ನಲ್ಲಿ ನನಗೆ ಕೆಲಸ ಸಿಗಬಹುದು ಅಂತೀಯಾ? ಅಥವಾ ಹೊಸಾ ರೆಪರ್ಟರಿ?"

"ಜೊತೆಗೆ ನನ್ನ ರೋಪ್ ಡ್ಯಾನ್ಸ್!"

"ಅದರ ಬಗ್ಗೆ ಆಮೇಲೆ ಯೋಚನೆಮಾಡೋಣ!"

ಅವಳು ಸಿಡುಕಿದಂತೆ ಧ್ವನಿ ಮಾಡಿಕೊಂಡು ಕೇಳಿದಳು, "ಯಾಕೆ?"

ಅವನು ನಕ್ಕ, ಅವಳೂ ನಕ್ಕಳು.

...ಅವರಿಬ್ಬರೂ ಹಾಗೇ ಮಾತನಾಡಿಕೊಳ್ಳುತ್ತ, ಪುಣೆಯನ್ನು ಇಬ್ಭಾಗವಾಗಿ ಮಾಡಿ, ರಾತ್ರಿಯ ಕತ್ತಲಲ್ಲಿ ಕಪ್ಪಗೆ ಹರಿಯುತ್ತಿದ್ದ ಮುತ್ತಾ ನದಿಯ ಸೇತುವೆಯ ಮೇಲೆ, ಈ ದಡದಲ್ಲಿದ್ದ ತಮ್ಮ ಭೂತಕಾಲವಾಗಿದ್ದ ಸರ್ಕಸ್‌ನ್ನು ಬಿಟ್ಟು–ಹೊಸ ಭವಿಷ್ಯದ ಹೊಸ ಕನಸಿನ ಆ ದಡದೆಡೆಗೆ ನಡೆಯಲಾರಂಭಿಸಿದರು,.

**ಪ್ರೀತಿಗೇಕೆ ಬೇಕು ಕಾರಣ?**
**ಕಾರಣ ಬೇಕೆಂಬುದೇ ಅದರ ಮರಣ, ಮತ್ತು**
**ಹೊಲಸು ಅವಶ್ಯಕತೆಯ ಜನನ...**

(ನೀರಿನ ತೊಟ್ಟಿಯ ಮೇಲೆ ಪೆಟ್ರೋಲ್ ಉರಿಸಿ, ಮೇಲಿನಿಂದ ಜಿಗಿಯುವ ಕಸರತ್ತಿನ ಪ್ರಸ್ತಾಪ (ಮಾತ್ರ) 'ಓ. ಹೆನ್ರಿ'ಯ ಒಂದು ಸಣ್ಣಕತೆಯಿಂದ ಎರವಲು ಪಡೆದದ್ದು)

## ಹ್ಯಾವ್ ಎ ನೈಸ್ ಡೇ

**ಶಿವಕುಮಾರ ಕೆ. ಎಸ್.** ks_shivu@yahoo.com